## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 20-09-2022

### ಮನ್ನಾಏಖೆಳ್ಳಿ ಪೊಲೀಸ್ ಠಾಣೆ ಯು.ಡಿ.ಆರ್ ಸಂಖ್ಯೆ : 17/2022 ಕಲಂ. 174 ಸಿಆರ್‌ಪಿಸಿ :-

ದಿನಾಂಕ: 19/09/2022 ರಂದು 13:00 ಗಂಟೆಗೆ ಫಿರ್ಯಾದಿ ಶ್ರೀಮತಿ ರೇಶ್ಮಾ ಗಂಡ ಮಾಣಿಕ ಪ್ರಭು ಶೇರಿಕಾರ ವಯ:25 ವರ್ಷ ಜಾತಿ:ಲಿಂಗಾಯತ ಉದ್ಯೋಗ: ಮನೆ ಕೆಲಸ ಸಾ||ಕಂದಗೂಳ ರವರು ಠಾಣೆಗೆ ಹಾಜರಾಗಿ ದೂರು ಹಾಜರುಪಡಿಸಿದ್ದು, ಸ್ವೀಕರಿಸಿಕೊಂಡು ದೂರು ಸಾರಂಶವೇನೆAದರೆ ನನಗೆ ಸುಮಾರು 6 ವರ್ಷದ ಹಿಂದೆ ಕಂದಗೂಳ ಗ್ರಾಮದ ಮಾಣಿಕಪ್ರಭು ರವರ ಜೋತೆಯಲ್ಲಿ ನಮ್ಮ ಧರ್ಮದ ಪ್ರಕಾರ ಮದುವೆ ಮಾಡಿರುತ್ತಾರೆ ನನಗೆ ಭವಾನಿ ಅಂತ ಒಬ್ಬಳು ಹೆಣ್ಣು ಮಗಳಿದ್ದು, ನಾನು ಸಧ್ಯ ಹೊಟ್ಟೆಲು ಇರುತ್ತೇನೆ. ನನ್ನ ಗಂಡ ಮಾಣಿಕ ಪ್ರಭು ರವರು ಒಕ್ಕಲುತನ ಕೆಲಸ ಮಾಡಿಕೊಂಡಿರುತ್ತಾರೆ. ನನ್ನ ಗಂಡನ ಹೆಸರಿನಲ್ಲಿ ಇದ್ದ ಜಮೀನು ಸರ್ವೆ ನಂ:29 ರಲ್ಲಿ 2 ಎಕ್ಕರೆ 29 ಗುಂಟೆ ಜಮೀನಿನ ಮೇಲೆ ನಮ್ಮೂರ ಪಿ.ಕೆ.ಪಿ.ಎಸ್. ಬ್ಯಾಂಕದಲ್ಲಿ 29,900/- ರೂ ಸಾಲವನ್ನು ತೆಗೆದುಕೊಂಡು ನಮ್ಮ ಜಮೀನಿನಲ್ಲಿ ಉಳಿಮೆ ಮಾಡಿರುತ್ತಾರೆ. ನಮ್ಮ ಜಮೀನಿನಲ್ಲಿ ಈ ವರ್ಷ ಯಾವದೇ ಬೆಳೆ ಬೆಳೆದಿರುವದಿಲ್ಲಾ. ಸಾಲ ಹೇಗೆ ತೀರಿಸಬೇಕು ಅಂತ ಆಗಾಗ ನನಗೆ ಹೇಳುತ್ತಿದ್ದರು ಆಗ ನಾನು ನನ್ನ ಗಂಡನಿಗೆ ಧೈರ್ಯ ತುಂಬಿರುತ್ತೇನೆ. ಹೀಗಿರುವಾಗ ದಿನಾಂಕ: 19/09/2022 ರಂದು ನಸುಕಿನ ಜಾವ 05:00 ಗಂಟೆಗೆ ನನ್ನ ಗಂಡ ಮಾಣಿಕಪ್ರಭು ಇವರು ದಿನನಿತ್ಯದಂತೆ ಹೊಲಕ್ಕೆ ಹೊಗಿರುತ್ತಾರೆ. ನಾನು ಮತ್ತು ನನ್ನ ಮಗಳು ಮನೆಯಲ್ಲಿದ್ದಾಗ ನನ್ನ ಮಾವನಾದ ಶೆಕ್ರೇಪ್ಪಾ ಶೇರಿಕಾರ ಇವರು 09:15 ಗಂಟೆಗೆ ನನಗೆ ಫೊನ್ ಕರೆ ಮಾಡಿ ತಿಳಿಸಿದ್ದೇನೆಂದರೆ ನನ್ನ ಮಗನಾದ ಮಾಣಿಕಪ್ರಭುÀ ಈತನು ನಮ್ಮ ಹೊಲದ ಕಟ್ಟೆಯ ಮೇಲೆ ಇರುವ ಮಾವಿನ ಮರಕ್ಕೆ ನೇಣು ಹಾಕಿಕೊಂಡಿರುತ್ತಾನೆ ಮಾಣಿಕಪ್ರಭು ಈತನು ಇನ್ನು ಜೀವಂತ ಇರುಬಹುದು ಅಂತ ನಾನು ಮತ್ತು ಪಕ್ಕದ ಜಮಿನಿನಲ್ಲಿ ಇದ್ದ ಶಾಂತಪ್ಪಾ ತಂದೆ ಚಂದ್ರಪ್ಪಾ ಶೇರಿಕಾರ ಹಾಗು ಬಂಡೇಪ್ಪಾ ತಂದೆ ಶಂಕ್ರೇಪ್ಪಾ ಶೇರಿಕಾರ ಮೂವರು ಮಾಣಿಕ ಪ್ರಭು ಈತನ ನೇಣು ತೆಗೆದುಕೊಂಡು ತಕ್ಷಣ ಅಲ್ಲಿಯೇ ಪಕ್ಕದ ರೋಡಿನ ಹೊಗುತ್ತಿದ್ದ ಆಟೋದಲ್ಲಿ ಹಾಕಿಕೊಂಡು ಗ್ರಾಮದಲ್ಲಿ ಚಿಕಿತ್ಸೆ ಕುರಿತು ತರುವಾಗ ದಾರಿಯ ಮಧ್ಯ ಮೃತಪಟ್ಟಿರುತ್ತಾನೆ. ಅಂತ ತಿಳಿಸಿ ನನ್ನ ಗಂಡನ ಮೃತ ದೇಹವನ್ನು ನಮ್ಮ ಮನೆಗೆ ತಂದಿರುತ್ತಾರೆ. ನನ್ನ ಗಂಡ ಮಾಣಿಕಪ್ರಭು ರವರು ಸಾಲದ ಬಾಧೆ ತಾಳಲಾರದೇ ಜೀವನದಲ್ಲಿ ಜಿಗುಪ್ಸೆಗೊಂಡ ನಸುಕಿನ ಜಾವ 05:15 ಗಂಟೆಯ ಅವಧಿಯಿಂದ 09:00 ಗಂಟೆಯ ಮಧ್ಯದಲ್ಲಿ ನೇಣು ಹಾಕಿಕೊಂಡಿದ್ದು, ದಾರಿಯ ಮಧ್ಯ 09:10 ಗಂಟೆ ಸುಮಾರಿಗೆ ಮೃತಪಟ್ಟಿರುತ್ತಾರೆ. ನನ್ನ ಗಂಡನ ಸಾವಿನ ಮೇಲೆ ಯಾರದೇ ಸಂಶಯ ಇರುವದಿಲ್ಲಾ ಅಂತ ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

### ಮೆಹಕರ್ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : -78/2022 ಕಲಂ. 307, 34 ಐಪಿಸಿ :-

ದಿನಾಂಕ: 18-09-2022 ರಂದು 2300 ಗಂಟೆಗೆ ಸರಕಾರಿ ಆಸ್ಪತ್ರೆ ಹುಲಸೂರದಿಂದ ಎಮ್ ಎಲ್ ಸಿ ಇದೆ ಅಂತಾ ಮಾಹಿತಿ ಬಂದಿದ್ದು ಕೂಡಲೇ ಹುಲಸೂರು ಸರಕಾರಿ ಆಸ್ಪತ್ರೆಗೆ ಭೇಟಿ ನೀಡು ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಬಾಬುರಾವ ತಂದೆ ವಿಶ್ವನಾಥ ಪಾಟೀಲ ವಯ 75 ರ಼ಷ ಜಾ:ಮರಾಠ ಉ:ಒಕ್ಕಲುತನ ಸಾ:ಮೇಹಕರ ರವರಿಗೆ ವಿಚಾರಿಸಿದ್ದು ಸದರಿಯವರು ತಾವು ದೂರು ನೀಡುವ ಬಗ್ಗೆ ವಿಚಾರಿಸಿ ನಾಳೆ ಹೇಳಿಕೆ ಕೊಡುವುದಾಗಿ ಹೇಳಿದ್ದು ಮರಳಿ ಠಾಣೆಗೆ ಬಂದಿರುತ್ತೇನೆ. ಗಾಯಾಳು ಹೆಚ್ಚಿನ ಚಿಕಿತ್ಸೆಗಾಗಿ ಬಸವಕಲ್ಯಾಣ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಅಂತಾ ಗೊತ್ತಾಗಿ ದಿನಾಂಕ:19-09-2022 ರಂದು 1400 ಗಂಟೆಗೆ ಸರಕಾರಿ ಆಸ್ಪತ್ರೆ ಬಸವಕಲ್ಯಾಣಕ್ಕೆ ಭೇಟಿ ನೀಡಿ ಗಾಯಾಳು ಬಾಬುರಾವ ರವರಿಗೆ ವಿಚಾರಿ ಹೇಳಿಕೆ ಪಡೆದುಕೊಳ್ಳಲು ಸದರಿಯವರು ನನಗೆ ಇಬ್ಬರು ಹೆಂಡತಿಯರಿದ್ದು ಮೊದಲನೇ ಹೆಂಡತಿ ಭಾರತಬಾಯಿ ಹಾಗೂ ಎರಡನೇ ಹೆಂಡತಿ ಆಶಾಬಾಯಿ ಅಂತಾ ಇದ್ದು ಭಾರತಬಾಯಿ ಇವಳಿಗೆ ಒಂದು ಗಂಡು ಎರಡು ಹೆಣ್ಣು ಮಕ್ಕಳಿದ್ದು ಆಶಾಬಾಯಿ ಇವಳಿಗೆ ಒಂದು ಗಂಡು ಎರಡು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಹೆಸರಿನಲ್ಲಿ 9 ಎಕರೆ ಹೊಲ ಇದ್ದು ಆ ಹೊಲದಲ್ಲಿ ಮೊದಲನೇ ಹೆಂಡತಿ ಮಗ ಅಮೃತ ಈತನ ಪಾಲಿಗೆ 4 ಎಕರೆ ಜಮೀನು ನ್ಯಾಯಾಲಯದ ಡಿಕ್ರಿ ಪ್ರಕಾರ ಆಗಿದ್ದು ಇರುತ್ತದೆ. ನಾನು ಎರಡನೇ ಹೆಂಡತಿ ಮಕ್ಕಳ ಜೊತೆ ಇದ್ದು 5 ಎಕರೆ ಜಮೀನು ನಾನು ಇಟ್ಟುಕೊಂಡಿರುತ್ತೇನೆ ನನಗೆ ಸಾಲ ಇದ್ದುದ್ದರಿಂದ ನನ್ನ ಬೀಗನಾದ ರ಼ಮಾಜಿ ಇವರಿಗೆ 4 ಎಕರೆ ಜಮೀನು ಮಾರಾಟ ಮಾಡಿದ್ದು ಅದನ್ನು ಅವರು ತನ್ನ ಮಗಳು ಸೋನಾಲಿ ಹೆಸರಿನಲ್ಲಿ ರೆಜಿಸ್ಟರಿ ಮಾಡಿಕೊಂಡಿರುರುತ್ತಾರೆ ಸೋನಾಲಿ ಇವಳು ನನ್ನೆ ಎರಡನೇ ಹೆಂಡತಿ ಮಗ ಅಮೂಲ ಈತನ ಹೆಂಡತಿ ಇರುತ್ತಾಳೆ. ನಾನು ನನ್ನ ಬೀಗರಿಗೆ ಕೊಟ್ಟ ಹೊಲ ನನ್ನ ಮೊದಲನೇ ಹೆಂಡತಿ ಮಗ ಅಮೃತ ಈತನ ಕಬ್ಜೆಯಲ್ಲಿರುತ್ತದೆ. ನಾನು ಅಮೂಲ ಈತನಿಗೆ ಸದರಿ ಹೊಲವನ್ನು ಅವರಿಗೆ ಬಿಟ್ಟುಕೊಟ್ಟು ನನ್ನ ಕಬ್ಜದಲ್ಲಿರುವ 5 ಎಕರೆ ಹೊಲವನ್ನು ನಿನ್ನ ಹೆಸರಿಗೆ ಮಾಡಿಕೊ ಅಂತಾ ಹೇಳಿದರು ಸದರಿಯವನು ನನ್ನ ಮಾತು ಕೇಳಿರುವುದಿಲ್ಲ ಹೀಗಿದ್ದು ನನ್ನ ಮಗ ಅಮೃತ ಈತನು ಗ್ರಾಮದಲ್ಲಿ ನನ್ನ ಕಬ್ಜೆಯಲ್ಲಿರುವ ಹೊಲವನ್ನು ನಮ್ಮ ತಂದೆ ತನ್ನ ಮಗ ಅಮೂಲ ಈತನ ಹೆಂಡತಿಯ ಹೆಸರಿನಲ್ಲಿ ಮಾಡಿದ್ದು ಅದನ್ನು ಬಿಡು ಅಂತಾ ಹೇಳುತ್ತಿದ್ದಾನೆ ಆ ಹೊಲವನ್ನು ನಾನು ನ್ಯಾಯಾಲಯದ ಡಿಕ್ರಿ ಪ್ರಕಾರ ಮಾಡಿಕೊಂಡಿದ್ದೇನೆ ಅದನ್ನು

ಬಿಡುವುದಿಲ್ಲ ಅಂತಾ ಹೇಳುತ್ತಾ ಓಡಾಡುತ್ತಿರುತ್ತಾನೆ ನಿನ್ನೆ ದಿನಾಂಕ: 18-09-2022 ರಂದು ರಾತ್ರಿ 1000 ಗಂಟೆಗೆ ನಾನು ಹೊಲದಿಂದ ಬಂದು ನನ್ನ ಮಗ ಅಮೃತ ಈತನಿಗೆ ಅವನು ಕಬ್ಜೆಯಲ್ಲಿರುವ ಹೊಲ ನನ್ನ ಸೊಸೆಯ ಹೆಸರಿಗೆ ಆಗಿದ್ದರ ಬಗ್ಗೆ ಪಹಣಿ ಪತ್ರೆಗೆಯನ್ನು ತೋರಿಸುವ ಸಲುವಾಗಿ ಅವರ ಮನೆಗೆ ಹೋಗಿದ್ದು ನಾನು ಹೋದ ತಕ್ಷಣ ಅವರು ಮನೆಯ ಬಾಗಿಲಿಗೆ ಕೊಂಡಿ ಹಾಕಿಕೊಂಡಿರುತ್ತಾರೆ ಆಗ ನಾನು ಬಾಗಿಲು ತೆಗೆಯಿರಿ ಅಂತಾ ಬಾಗಿಲು ಬಡಿದಾಗ ಒಳಗಿನಿಂದ ನನ್ನ ಮೊದಲನೇ ಹೆಂಡತಿ ಭಾರತಬಾಯಿ ಹಾಗೂ ಮಗ ಅಮೃತ ಇಬ್ಬರೂ ಒಳಗಿನಿಂದ ಬಂದವರೇ ಮೈಮೇಲೆ ಡಿಸೇಲ್ ಸುರಿದಿರುತ್ತಾರೆ ನನ್ನ ಹೆಂಡತಿ ಇವನಿಗೆ ಜೀವಂತ ಬಿಡಬಾರದು ಅಂತಾ ಅಂದು ಬೆಂಕಿ ಕಡ್ಡಿ ಗೀರಿ ನನ್ನ ಮೈಮೇಲೆ ಎಸೆದಿರುತ್ತಾಳೆ ಆಗ ನನ್ನ ಮೈಗೆ ಬೆಂಕಿ ಹೊತ್ತುಕೊಂಡಿದ್ದು ನನ್ನ ತಮ್ಮನ ಸೊಸೆಯಾದ ಪ್ರಭಾವತಿ ಇವಳು ಬಂದು ನನ್ನ ಮೈಮೇಲೆ ನೀರು ಸುರಿದು ಬೆಂಕಿ ಆರಿಸುತ್ತಾಳೆ ಆಗ ನನ್ನ ಎಡ ಭುಜ, ಎರಡೂ ತೊಡೆಗಳು, ಎಡಗೈ ಮುಂಗೈ ಹತ್ತಿರ ಹಾಗೂ ಎಡ ಕುತ್ತಿಗೆಗೆ ಸುಟ್ಟಗಾಯ ಆಗಿರುತ್ತದೆ ಆಗ ನನ್ನ ತಮ್ಮನ ಮಗನಾದ ಬಾಲಾಜಿ ಈತನು ನನಗೆ ಹುಲಸೂರು ಆಸ್ಪತ್ರೆಗೆ ಚಿಕಿತ್ಸೆ ಕುರಿತು ತೆಗೆದುಕೊಂಡು ಬಂದಿರುತ್ತಾನೆ. ನಿನ್ನೆ ದಿನಾಂಕ:18-09-2022 ರಂದು ರಾತ್ರಿ 11 ಗಂಟೆಗೆ ನೀವು ಬಂದು ನನಗೆ ವಿಚಾರಿಸಿದಾಗ ನಾನು ವಿಚಾರ ಮಾಡಿ ದೂರು ಕೊಡುತ್ತೇನೆ ಅಂತಾ ಹೇಳಿದ್ದು ವಿಚಾರಮಾಡಿ ಇಂದು ದಿನಾಂಕ:19-09-2022 ರಂದು ತಮ್ಮ ಮುಂದೆ ಹೇಳಿಕೆ ನೀಡುತ್ತಿದ್ದೇನೆ . ಕಾರಣ ನನಗೆ ಕೊಲೆ ಮಾಡುವ ಉದ್ದೇಶದಿಂದ ನನ್ನ ಮೇಲೆ ಡಿಸೆಲ ಸುರಿದು ಬೆಂಕಿ ಹಚ್ಚಿದ ನನ್ನ ಹೆಂಡತಿ ಭಾರತಬಾಯಿ ಹಾಗೂ ಮಗ ಅಮೃತ ಇಬ್ಬರ ವಿರುಧ್ದ ಕಾನೂನು ಕ್ರಮ ಕೈಕೊಳ್ಳಬೇಕೆಂದು ಅಂತ ಕೊಟ್ಟ ದೂರಿನ , ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಖಟಕಚಿಂಚೋಳ್ಳಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 79/2022 ಕಲಂ. 323, 498(ಎ), 504, 506 ಜೊತೆ 34 ಐಪಿಸಿ :-**

ದಿನಾಂಕ: 19/09/2022 ರಂದು 19:00 ಗಂಟೆಗೆ ಪಿರ್ಯಾದಿ ಶ್ರೀಮತಿ ಶಿವಲೀಲಾ ಗಂಡ ಮಂಥನ ಗಾಯಕವಾಡ ಸಾ: ಗಂಗಾಚಲ, ನಾಂದೇಡ (ಮಹಾರಾಷ್ಟ್ರ) ಸದ್ಯ ಗೋರಚಿಂಚೋಳಿ ರವರು ಠಾಣೆಗೆ ಹಾಜರಾಗಿ ದೂರು ಹಾಜರು ಪಡಿಸಿದ್ದು ಸಾರಾಂಶವೆನAದರೆ, ನಾನು ಮನೆ ಕೆಲಸ ಮಾಡಿಕೊಂಡು ಇರುತ್ತೇನೆ. ಮತ್ತು 2021 ನೇ ಸಾಲೀನ ನವೆಂಬರ ತಿಂಗಳಲ್ಲಿ ನಮ್ಮ ತಂದೆ ಧೂಳಪ್ಪ ಕಾಂಬಳೆ ರವರು ಮಹಾಷ್ಟ್ರದ ನಾಂದೆಡ ನಗರದ ಮಂಥನ ತಂದೆ ಶ್ರೀರಾಮ ಗಾಯಕವಾಡ ರವರ ಜೊತೆ ನಮ್ಮ ಹಿಂಧು ಸಂಪ್ರದಾಯದAತೆ ಮಧುವೆ ಮಾಡಿಕೊಟ್ಟಿದ್ದು ಇರುತ್ತದೆ. ಮಧುವೆಯಾದ ನಂತರ ಸುಮಾರು 4-5 ತಿಂಗಳುಗಳ ಕಾಲ ನನ್ನ ಗಂಡ ಮಂಥನ ಮತ್ತು ನನ್ನ ಅತ್ತೆ ಮಹಾದೇವಿ ಹಾಗೂ ನನ್ನ ನಾಧನಿಯರುಗಳಾದ ವೈಶಾಲಿ ತಂದೆ ಶ್ರೀರಾಮ ಮತ್ತು ವರ್ಷಾ ಗಂಡ ಗೋವಿಂದ ಕಾಳೆ ರವರುಳು ನನ್ನ ಜೊತೆ ಚೆನ್ನಾಗಿ ಹೊಂದಿಕೊAಡು ಇದ್ದು, ಇತ್ತಿಚಿನ 4-5 ತಿಂಗಳುಗಳಿAದ ಮನೆಯಲ್ಲಿ ನನ್ನ ಜೊತೆ ವಿನಾಕಾರಣ ಜಗಳ ತೆಗೆದು ನೀನು ಸರಿಯಾಗಿ ಕೆಲಸ ಮಾಡಲ್ಲ ಆಗಾಗ ನನ್ನ ಗಂಡ ಮಂಥನ ಹಾಗೂ ನಮ್ಮ ಅತ್ತೆ ಮಹಾದೇವಿ ಮತ್ತು ನಾದನಿಯರು ನನಗೆ ಹೊಡೆ-ಬಡೆ ಮಾಡಿ ಮಾನಸಿಕ ಹಾಗೂ ದೈಹಿಕವಾಗಿ ಕೀರುಕುಳ ನೀಡುತಿದ್ದರು ಈ ವೇಳೆಯಲ್ಲಿ ನಾನು ಈ ವಿಷಯವನ್ನು ಗೋರ ಚಿಂಚೋಳಿ ಗ್ರಾಮದ ನಮ್ಮ ತಂದೆ-ತಾಯಿಯವರುಗಳಿಗೆ ಫೋನ್ ಮಾಡಿ ತಿಳಿಸಿದಾಗ ಅವರು ನನಗೆ ಇಗತಾನೆ ಮಧುವೆಯಾಗಿದೆ ಸ್ವಲ್ಪದಿನ ಸಹಿಕೊಂಡು ಇರು ಮುಂದೆ ಎಲ್ಲಾ ಸರಿ ಹೊಗುತ್ತದೆ ಅಂತ ಸಮಾಧಾನ ಮಾಡುತಿದ್ದರು ಇದರಿಂದ ನಾನು ನನ್ನ ಗಂಡನ ಮನೆಯವರ ಎಲ್ಲಾ ಕಿರುಕುಳವನ್ನು ಸಹಿಸಿಕೊಂಡು ಇರುತ್ತಿದ್ದೆ. ಮತ್ತು ನಾನು 2-3 ತಿಂಗಳ ಹಿಂದೆ ಮತ್ತೆ ನನ್ನ ಗಂಡ ಹಾಗೂ ಅವರ ಮನೆಯವರು ನನ್ನ ಜೊತೆ ಜಗಳ ತೆಗೆದು ನನ್ನ ಗಂಡನಿಗೆ ಡೈವರ್ಸ ಕೊಡು ಹೊಡೆ-ಬಡೆ ಮಾಡಿದ್ದರಿಂದ ನಾನು ನನ್ನ ಗಂಡನ ಮನೆಯಾದ ನಾಂದೇಡ ನಗರದಿಂದ ಭಾಲ್ಕಿ ತಾಲೂಕಿನ ನಮ್ಮ ತವರು ಮನೆಯಾದ ಗೋರ ಚಿಂಚೋಳಿ ಗ್ರಾಮಕ್ಕೆ ಬಂದು ನಮ್ಮ ತಂದೆ-ತಾಯಿಯವರ ಜೊತೆ ವಾಸವಾಗಿರುತ್ತೆನೆ. ಮತ್ತು ಆಗಾಗ ನಮ್ಮ ಗಂಡ ಮಂಥನ ಹಾಗೂ ಅವರ ಮನೆಯವರು ನಮ್ಮ ಗೋರಚಿಂಚೋಳಿ ಗ್ರಾಮಕ್ಕೆ ಬಂದು ನಮ್ಮ ಜೊತೆ ಜಗಳ ಮಾಡುತ್ತಿದ್ದು ಈ ವೇಳೆಯಲ್ಲಿ ನಮ್ಮ ಓಣಿಯ ಜನರು ಜಗಳ ಬಿಡಿಸಿಕೊಳ್ಳುತಿದ್ದರು. ಹೀಗಿರುವಾಗ ದಿನಾಂಕ: 16/09/2022 ರಂದು ಮಧ್ಯಾನ 2 ಪಿ.ಎಮ್ ಗಂಟೆಯ ಸುಮಾರಿಗೆ ನಾನು ಹಾಗೂ ನಮ್ಮ ತಂದೆ ಧೂಳಪ್ಪ ಮತ್ತು ನನ್ನ ತಾಯಿ ಪ್ರಯಾಗಬಾಯಿ ರವರುಗಳು ಗೋರಚಿಂಚೋಳಿ ಗ್ರಾಮದ ನಮ್ಮ ಮನೆಯಲ್ಲಿರುವಾಗ ಇದೆ ವೇಳೆಯಲ್ಲಿ ನನ್ನ ಗಂಡ ಮಂಥನ ಹಾಗೂ ನಮ್ಮ ಅತ್ತೆ ಮಹಾದೇವಿ ರವರುಗಳು ನಮ್ಮ ಮನೆಯ ಹತ್ತಿರ ಬಂಧವರೆ ನನ್ನ ಗಂಡ ಮಂಥನ ರವರು ನನಗೆ ಅವಾಚ್ಯ ಬೈದು ನಿನಗ ಡೈವರ್ಸ ಸಲುವಾಗಿ ನೋಟಿಸ್ ಕಳುಹಿಸಿಕೊಟ್ಟರು ಯಾಕ್ ಬಂದಿಲ ಅಂತ ಮರಾಠಿಯಲ್ಲಿ ಬೈದವನೆ ತನ್ನ ಕೈಯಿಂದ 2-3 ಮೂರು ಬಾರಿ ನನ್ನ ಕಪಾಳ ಮೇಲೆ ಹೊಡೆದಿರುತ್ತಾನೆ. ಈ ವೇಳೆಯಲ್ಲಿ ನನ್ನ ಗಂಡನ ಜೊತೆ ಬಂದಿದ್ದ ನಮ್ಮ ಅತ್ತೆ ಮಹಾದೇವಿ ಇವಳು ನನಗೆ ನೀ ನನ್ನ ಮಗನಿಗೆ ಡೈವರ್ಸ ಕೊಡದೆ ಹೊದರೆ ನಿನಗೆ ಜೀವ ಸಹೀತ ಬಿಡಲ್ಲಾ ಅಂತ ಜೀವದ ಬೇದರಿಕೆ ಹಾಕಿರುತ್ತಾಳೆ, ಈ ವೇಳೆಯಲ್ಲಿ ಅಲ್ಲೆ ಮನೆಯಲ್ಲಿದ್ದ ನಮ್ಮ ತಂದೆ ಧೂಳಪ್ಪ ಕಾಂಬಳೆ, ನನ್ನ ತಾಯಿ ಪ್ರಯಾಗಬಾಯಿ ಹಾಗೂ ನಮ್ಮ ಓಣಿಯ ಜನರಾದ ಪಂಡರಿ ತಂದೆ ಅಂಬಾಜಿ ಮನಕೆ, ದತ್ತಾ ವಿಠಲ ಮನಕೆ ಮತ್ತು ಯಂಕಮ್ಮ ಗಂಡ ಶಿವರಾಜ ಕಾಸಲೆ ರವರುಗಳು ನಮ್ಮ ಜಗಳ ನೋಡಿ ಬಿಡಿಸಿಕೊಂಡಿರುತ್ತಾರೆ. ಆದ್ದರಿಂದ ನನಗೆ ಮಾನಸಿಕ

ಹಾಗೂ ದೈಹಿಕ ಕಿರುಕುಳ ನೀಡಿ ಹೊಡೆ ಬಡೆ ಮಾಡಿ ಅವಾಚ್ಯಾವಾಗಿ ಬೈದು ಜೀವದ ಬೇದರಿಕೆ ಹಾಕಿದ ನನ್ನ ಗಂಡ ಮಂಥನ ತಂದೆ ಶ್ರೀರಾಮ ಗಾಯಕವಾಡ ಅತ್ತೆ ಮಹಾದೇವಿ ಗಂಡ ಶ್ರೀರಾಮ ಗಾಯಕವಾಡ, ಹಾಗೂ ನಾದನಿಯವರುಗಳಾದ ವೈಶಾಲಿ ತಂದೆ ಶ್ರೀರಾಮ ಗಾಯಕವಾಡ ಮತ್ತು ವರ್ಷಾ ಗಂಡ ಗೋವಿಂದ ಕಾಳೆ ಮು: ಗಂಗಾಚಲ, ನಾಂದೇಡ (ಮಹಾರಾಷ್ಟ್ರ) ರವರುಳ ವಿರುದ್ದ ಕಾನೂನು ಕ್ರಮ ಕೈಕೊಳ್ಳಬೇಕೆಂದು ಅಂತ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಮಂಠಾಳಾ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 0081/2022 ಕಲಂ 454, 380 ಐಪಿಸಿ :-**

ದಿನಾಂಕ: 19/09/2022 ರಂದು 19:30 ಗಂಟೆಗೆ ಫಿರ್ಯಾದಿ ಶ್ರೀಮತಿ ರತ್ನಮ್ಮಾ ಗಂಡ ಅನೀಲಕುಮಾರ ಪಾಡೆ ವಯ|| 53 ವರ್ಷ ಜಾ|| ಲಿಂಗಾಯತ ಉ|| ಸರಕಾರಿ ಪ್ರಾಥಾಮಿಕ ಶಾಲೆಯ ಶಿಕ್ಷಕಿ ಸಾ|| ಮಂಠಾಳ ತಾ|| ಬಸವಕಲ್ಯಾಣ ಇವರು ಠಾಣೆಗೆ ಹಾಜರಾಗಿ ದೂರು ನೀಡಿದ್ದು, ಸ್ವೀಕರಿಸಿಕೊಂಡಿದ್ದು ಸಾರಾಂಶವೇನೆAದರೆ, ನಾನು ಉರ್ಕಿ ಗ್ರಾಮದಲ್ಲಿ ಸರಕಾರಿ ಪ್ರಾಥಾಮಿಕ ಶಾಲೆಯಲ್ಲಿ ಶಿಕ್ಷಕಿ ಅಂತಾ ಕರ್ತವ್ಯ ನಿರ್ವಹಿಸುತ್ತಾ ಮಂಠಾಳ ಗ್ರಾಮದಲ್ಲಿರುವ ನಮ್ಮ ಮನೆಯಲ್ಲಿ ನಾನು ಒಬ್ಬಳೆ ವಾಸವಾಗಿರುತ್ತೇನೆ. ಹೀಗಿರುವಾಗ ದಿನಾಂಕ 15/09/2022 ರಂದು ಬೆಳಗ್ಗೆ 09:30 ಗಂಟೆಗೆ ನಮ್ಮ ಮನೆಯ ಮುಖ್ಯ ಬಾಗಿಲಿಗೆ ಕಿಲಿ ಹಾಕಿ ಅಡುಗೆ ಮನೆ ಮತ್ತು ಬೆಡ್ ರೂಮ್ ಗೆ ಕೊಂಡಿ ಹಾಕಿ ಎಂದಿನAತೆ ನಾನು ಕರ್ತವ್ಯಕ್ಕೆ ಸರಕಾರಿ ಪ್ರಾಥಾಮಿಕ ಶಾಲೆ ಉರ್ಕಿ ಗ್ರಾಮಕ್ಕೆ ಹೋಗಿರುತ್ತೇನೆ. ಕರ್ತವ್ಯ ನಿರ್ವಹಿಸಿ ಸಾಯಂಕಾಲ 04:30 ಗಂಟೆಯ ಸುಮಾರಿಗೆ ಮರಳಿ ಮಂಠಾಳ ಗ್ರಾಮದಲ್ಲಿರುವ ನಮ್ಮ ಮನೆಗೆ ಬಂದು ನೊಡಲು ನಮ್ಮ ಮನೆಯ ಮುಖ್ಯ ಬಾಗಿಲಿಗೆ ಹಾಕಿದ ಕಿಲಿ ಮುರಿದಿದ್ದು ಇರುತ್ತದೆ. ಆಗ ನಾನು ಮುಖ್ಯ ಬಾಗಿಲು ತೆರೆದು ಹಾಲ್ ನಲ್ಲಿ ಇದ್ದ ಅಲಾಮರಿ ನೊಡಲು ಅಲಮಾರಿ ತೆರೆದಿದ್ದು ಒಳಗಡೆ ಇರುವ ಲಾಕರ್ ಮುರಿದಿದ್ದು ಸದರಿ ಅಲಮಾರಿಯಲ್ಲಿದ್ದ 01) 30 ಗ್ರಾಂ ಬಂಗಾರದ ಒಂದು ನಾನ್ ಅ|| ಕಿ|| 151000/-ರೂ 02) 05 ಗ್ರಾಂ ಬಂಗಾರದ ಒಂದು ಜೊತೆ ಕಿವಿಓಲೆ ಅ|| ಕಿ|| 31200/- ರೂ 03) 2.5 ಗ್ರಾಮ ಬಂಗಾರದ ಒಂದು ಊಂಗುರು ಅ|| ಕಿ|| 12500/- ರೂ 04) 01 ಗ್ರಾಂ ಬಂಗಾರದ ಕಿವಿ ಓಲೆಯ ಟಾಪ್ ಅ|| ಕಿ|| 4180/- ರೂ 05) ನಗದು ಹಣ 1000/- ರೂ ಹೀಗೆ ಒಟ್ಟು 199880/- ರೂಪಾಯಿ ಬೆಲೆ ಬಾಳುವ ಆಭರಣಗಳು ಮತ್ತು ನಗದು ಹಣ ಅಲಮಾರಿಯಲ್ಲಿ ಇರಲಿಲ್ಲಾ. ಅಡುಗೆ ಮನೆ ಮತ್ತು ಬೆಡ್ ರೂಮ್ ನೊಡಲು ಯಾವುದೆ ವಸ್ತು ಹೊಗಿರಲಿಲ್ಲಾ. ದಿನಾಂಕ 15/09/2022 ರಂದು ಬೆಳಗ್ಗೆ 09:30 ಗಂಟೆಯಿAದ ಸಾಯಂಕಾಲ 04:30 ಗಂಟೆಯ ಮದ್ಯದ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಮೇಲೆ ನಮೂದು ಮಾಡಿದ ಬಂಗಾರದ ಆಭರಣಗಳು ಮತ್ತು ನಗದು ಹಣ ಕಳವು ಮಡಿಕೊಂಡು ಹೋಗಿದ್ದು ಎಲ್ಲಾ ಕಡೆ ಹುಡುಕಾಡಿ ಮತ್ತು ನಮ್ಮ ಮಕ್ಕಳ ಜೊತೆ ವಿಚಾರ ಮಾಡಿಕೊಂಡು ಠಾಣೆಗೆ ಬಂದು ದೂರು ಕೊಡಲು ತಡವಾಗಿದ್ದು ಇರುತ್ತದೆ ಅಂತ ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಬೀದರ ನೂತನ ನಗರ ಠಾಣೆ ಪ್ರಕರಣ ಸಂಖ್ಯೆ : 168/2022 ಕಲಂ 379 ಐಪಿಸಿ :-**

ದಿನಾಂಕ 19/09/2022 ರಂದು 1945 ಗಂಟೆಗೆ ಫಿರ್ಯಾದುದಾರರಾದ ಶ್ರೀ. ಪ್ರಶಾಂತ ತಂದೆ ರಾಮದಾಸ ಮೇತ್ರೆ ವಯ:37 ವರ್ಷ ಜಾತಿ:ಎಸ್.ಸಿ. ಮಾದಿಗ ಉ:ಮ್ಯಾನೇಜರ ಸಾ/ಷಾಹಗಂಜ ಬೀದರ ಇವರು ಠಾಣೆಗೆ ಹಾಜರಾಗಿ ಸಲ್ಲಿಸಿದ ದೂರನ್ನು ಸ್ವೀಕರಿಸಿಕೊಂಡಿದ್ದು ಸಾರಾಂಶವೇನೆAದರೆ, ನಾನು ಒಂದು ಹೀರೊ ಸ್ಪ÷ೆಲಂಡರ ಮೊಟರ ಸೈಕಲ ನಂ. ಕೆಎ38ಕ್ಯು1984 ನೇದನ್ನು 2013 ಸಾಲೀನಲ್ಲಿ ಖರೀದಿಸಿದ್ದು, ಅದನ್ನು ನನ್ನ ಹೆಸರಿನಲ್ಲಿ ನೊಂದಾಯಿಸಿದ್ದು ಇರುತ್ತದೆ. ಹೀಗಿರುವಾಗ ದಿನಾಂಕ 29/08/2022 ರಂದು ನನ್ನ ಕೆಲಸಕ್ಕೆಂದ್ದು ಬೀದರ ನಗರದ ಜ್ಯೆಲ ಕಾಲೋನಿಯಲ್ಲಿ ಇರುವ ಬಜಾಜ ಫೈನಾನ್ಸ ಕಛೇರಿಗೆ ಬಂದು ಮದ್ಯಾಹ್ನ 3:30 ಪಿ.ಎಮ್. ಗಂಟೆಯ ಸುಮಾರಿಗೆ ನನ್ನ ಮೊಟರ ಸೈಕಲನ್ನು ಬೀದರ ಕಛೇರಿಯ ಹತ್ತೀರ ನಿಲ್ಲಿಸಿ ಕಛೇರಿಯಲ್ಲಿ ಹೋಗಿ ನನ್ನ ಕೆಲಸ ಮುಗಿಸಿಕೊಂಡು ಮರಳಿ 10:00 ಪಿ.ಎಮ್. ಗಂಟೆಯ ಸಮಯಕ್ಕೆ ಕಛೇರಿಯಿಂದ ಹೋರಗೆ ಬಂದು ನೋಡಿದಾಗ ನನ್ನ ಮೊಟರ ಸೈಕಲ ನಾನು ಇಟ್ಟಿದ್ದ ಜಾಗದಲ್ಲಿ ಇದ್ದಿರುವದಿಲ್ಲ. ನನ್ನ ಮೊಟರ ಸೈಕಲ ಕಳವು ಆದ ಬಗ್ಗೆ ನನ್ನ ಪರಿಚಯದವರಾದ ಶ್ರೀ.ಶಿವಕುಮಾರ ತಂದೆ ಅಶೋಕಕುಮಾರ ಸಾ/ಶಿವನಗರ ಬೀದರ ಇವರಿಗೆ ತಿಳಿಸಿದೆನು. ನಂತರ ನಾನು ಮತ್ತು ಅವರು ಕೂಡಿಕೊಂಡು ಕಳವು ಆದ ನನ್ನ ಮೊಟರ ಸೈಕಲನ್ನು ಎಲ್ಲಾ ಕಡೆಗೆ ಹುಡುಕಾಡಲಾಗಿ ಎಲ್ಲಿಯೂ ಸಿಗಲಿಲ್ಲ.. ಕಳ್ಳತನವಾದ ಮೊಟರ ಸೈಕಲ ವಿವರ ಹೀಗಿರುತ್ತದೆ: ಹೀರೊ ಸ್ಪ÷ೆಲಂಡರ ಪ್ಲಸ್ ಮೊಟರ ಸೈಕಲ ನಂ. ಕೆಎ38ಕ್ಯೂ1984 ಚಾ.ನಂ. ಎಂಬಿಎಲ್‌ಹೆಚ್‌ಎ10ಎಎAಡಿಹೆಚ್‌ಎ59026 ಇಂಜಿನ ನಂ. ಹಚ್‌ಎ10ಇಜೆಡಿಹೆಚ್‌ಎ082528 ಮಾಡಲ್: 2013(ಕಪ್ಪು ಬಣ್ಣ) ಇದ್ದು ಅಂದಾಜು ಕಿಮ್ಮತ್ತು ರೂ- 25,000/-ರೂ

ಆಗಿರುತ್ತದೆ.  ಕಳುವಾದ ಮೊಟರ ಸೈಕಲನ್ನು ಎಲ್ಲ ಕಡೆಗೆ ಹುಡುಕಾಡಿ ಎಲ್ಲಿಯೂ ಸಿಗದಿದ್ದಾಗÀ ಠಾಣೆಗೆ ಬಂದು ದೂರು ನೀಡಲು ತಡವಾಗಿರುತ್ತದೆ ಅಂತ ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಭಾಲ್ಕಿ ನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 154/2022 ಕಲಂ. 379 ಐಪಿಸಿ :-**

ದಿನಾಂಕ 19/09/2022 ರಂದು 18;30 ಗಂಟೆಗೆ ಶ್ರೀ ಪ್ರವೀಣ ತಂದೆ ಕೇರಬಾ ಕಾಂಬಳೆ ಸಾ; ಹೊಸ ಭೀಮ ನಗರ ಭಾಲ್ಕಿ ಇವರು ಠಾಣೆಗೆ ಬಂದು ದೂರು  ಸಲ್ಲಿಸಿದ್ದು ಸಾರಾಂಶವೇನೆಂದರೆ, ನಾನು 2010 ನೇ ಸಾಲಿನಲ್ಲಿ ಒಂದು ಸ್ಪ್ಲೇಂಡರ ಪ್ಲಸ್ ಮೋಟಾರ ಸೈಕಲ್ ನಂ. ಕೆಎ-39/ಜೆ-5219 ನೇದ್ದನ್ನು ಖರೀದಿ ಮಾಡಿರುತ್ತೇನೆ.  ದಿನಾಂಕ 25/05/2022 ರಂದು ಸಾಯಂಕಾಲ 5;30 ಗಂಟೆಯ ಸುಮಾರಿಗೆ ಭಾಲ್ಕಿ ನಗರದಲ್ಲಿರುವ ಹೊಸ ಭೀಮ ನಗರದಲ್ಲಿರುವ ನಮ್ಮ ಮನೆಯಿಂದ ನನ್ನ ಮೋಟಾರ ಸೈಕಲ ಮೇಲೆ ನಾನು ಕುಳಿತು ಮೋಟಾರ ಸೈಕಲ ಚಲಾಯಿಸುತ್ತಾ ಭಾಲ್ಕಿ ರೇಲ್ವೆ ನಿಲ್ದಾಣದ ಹಿಂದೆ ಪ್ಲಾಟ್ ಫಾಂ. ನಂ. 2 ರ ಹಿಂದೆ ಇರುವ ಬೀದರ ರೋಡಿನ ಪಕ್ಕದಲ್ಲಿರುವ ರೇಲ್ವೆ ಕಂಪೌಂಡ ಹತ್ತಿರ ಸಾಯಂಕಾಲ 5;45 ಗಂಟೆಗೆ ಹೋಗಿ ಮೋಟಾರ ಸೈಕಲ ನಿಲ್ಲಿಸಿ ನಾನು ರೇಲ್ವೆ ನಿಲ್ದಾಣದಲ್ಲಿ ವಾಕಿಂಗ ಮಾಡುತ್ತಾ ಹೋಗಿ ವಾಕಿಂಗ ಮುಗಿಸಿಕೊಂಡು ಮರಳಿ ಸಾಯಂಕಾಲ 6 ಗಂಟೆಯ ಸುಮಾರಿಗೆ ನಾನು ಮೋಟಾರ ಸೈಕಲ ನಿಲ್ಲಿಸಿದ ಸ್ಥಳದಲ್ಲಿ ಬಂದು ನೋಡಲು ನನ್ನ ಮೋಟಾರ ಸೈಕಲ ಇರಲಿಲ್ಲಾ. ನಂತರ ನಾನು ರೇಲ್ವೆ ನಿಲ್ದಾಣದ ಅಕ್ಕಪಕ್ಕದಲ್ಲಿ ಮತ್ತು ಸುತ್ತಮುತ್ತಲು ನೋಡಲು ನನ್ನ ಮೋಟಾರ ಸೈಕಲ ಬಗ್ಗೆ ಯಾವುದೆ ಮಾಹಿತಿ ಸಿಕ್ಕಿರುವುದಿಲ್ಲಾ. ನಂತರ ನಾನು ನಮ್ಮ ಭಾವ ರವಿಂದ್ರ ತಂದೆ ಶಾಮರಾವ ಕಾಂಬಳೆ ಸಾ; ಭೀಮ ನಗರ ಭಾಲ್ಕಿ ರವರಿಗೆ ಫೋನ ಮಾಡಿ ಕರೆಯಿಸಿದ್ದರಿಂದ ಅವರು ಸಹ ಸ್ಥಳಕ್ಕೆ ಬಂದ ನಂತರ ನಾನು ಮತ್ತು ನಮ್ಮ ಭಾವ ರವಿ ಇಬ್ಬರು ಕೂಡಿ ನನ್ನ ಮೋಟಾರ ಸೈಕಲ ಬಗ್ಗೆ ಭಾಲ್ಕಿ ಎ.ಪಿ.ಎಂ.ಸಿ. ಮತ್ತು ಭಾಲಿ  ನಗರದಲ್ಲಿ ಹಾಗೂ ಇತರೆ ಕಡೆಗಳಲ್ಲಿ ಹುಡಕಾಡಲು ಯಾವುದೆ ಮಾಹಿತಿ ಸಿಕ್ಕಿರುವುದಿಲ್ಲಾ. ನನ್ನ ಮೋಟಾರ ಸೈಕಲ ನಂ. ಕೆಎ-39/ಜೆ-5219 ಅ;ಕಿ; 20,000/- ರೂ ಬೆಲೆಬಾಳುವ  ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ. ನನ್ನ ಮೋಟಾರ ಸೈಕಲ ಕಳವು ಆದ ಬಗ್ಗೆ ಭಾಲ್ಕಿ ನಗರದಲ್ಲಿ ಮತ್ತು ಇತರೆ ಕಡಗಳಲ್ಲಿ ಹುಡಕಾಡಿ ಠಾಣೆಗೆ ಬಂದು ದೂರು ನೀಡಲು ವಿಳಂಬವಾಗಿರುತ್ತದೆ. ಅಂತ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಭಾಲ್ಕಿ ಗ್ರಾಮೀಣ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ :- 135/2022 ಕಲಂ. 78(3)  ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ. 19/09/2022 ರಂದು 1530 ಗಂಟೆಗೆ ಸಿಪಿಐ ಭಾಲ್ಕಿ ಗ್ರಾಮೀಣ ವೃತ್ತ ರವರು ಕಛೇರಿಯಲ್ಲಿದ್ದಾಗ ತಳವಾಡ (ಕೆ)  ಗ್ರಾಮಲ್ಲಿ ಒಬ್ಬ ವ್ಯಕ್ತಿಯು ಮಟಕಾ ನಡೆಯುಸುತ್ತಿದ್ದಾನೆ ಅಂತ ಬಾತ್ಮಿ ಬಂದ ಮೇರೆಗೆ ಪಂಚರು ಹಾಗೂ ಸಿಬ್ಬಂದಿಯವರೊಂದಿಗೆ ತಳವಾಡ(ಕೆ) ಗ್ರಾಮದ ವಿಜಯಕುಮಾರ ಕಮಲಾಕರ ರವರ ಮನೆಯ ಹತ್ತಿರ 1610 ಗಂಟೆಗೆ ಹೋಗಿ ಜೀಪ ನಿಲ್ಲಿಸಿ ಅಲಿಂದ ನಾನು, ಪಂಚರು  ಹಾಗೂ ಸಿಬ್ಬಂದಿಯವರು ನಡೆದುಕೊಂಡು ಸ್ವಲ್ಪ  ಮುಂದೆ ಹೋಗಿ ಮೇರೆಯಾಗಿ ನಿಂತು ನೋಡಿದಾಗ ಒಬ್ಬ ವ್ಯಕ್ತಿಯು ಮಹದೇವ ಮಂದಿರದ ಹತ್ತೀರ ಸರ್ವಜನಿಕ ಸ್ಥಳದಲ್ಲಿ 1 ರೂಪಾಯಿ 90 ರೂಪಾಯಿ ನೀಡುತ್ತೇನೆ ಇದು ಮಟಾಕಾ ನಸೀಬಿನ ಆಟ ಅಂತ  ಸರ್ವಜನಿಕರಿಗೆ ಕೂಗಿ, ಕೂಗಿ ಕರೆದು ಮಟಕಾ ಚೀಟಿ ಬರೆದುಕೊಳ್ಳುವುದನ್ನು ಖಚಿತ ಪಡಿಸಿಕೊಂಡು ಪಂಚರ ಸಮಕ್ಷಮ ಸಿಬ್ಬಂದಿಯೊಂದಿಗೆ ಒಮ್ಮೆಲೆ 1615 ಗಂಟೆಗೆ ಅವನ ಮೇಲೆ ದಾಳಿ ಮಾಡಿ ಅವನಿಗೆ ಹಿಡಿದುಕೊಂಡು ಅವನ ಹೆಸರು ವಿಚಾರಿಸಿದಾಗ ತನ್ನ ಹೆಸರು ಶಿವರಾಜ ತಂದೆ ರಾಮಚಂದ್ರ ಉಪ್ಪಾರ ವಯ:34 ರ್ಷ ಜಾ: ಉಪ್ಪಾರ ಉ:ಪಾನಿಪುರಿ ಅಂಗಡಿ ಸಾ;ತಳವಾಡ (ಕೆ)  ಅಂತ ತಿಳಿಸಿದನು ನಂತರ ಅವನ ಹತ್ತಿರ ಎನಿದೆ ಅಂತ ಕೇಳಿದಾಗ  1) 04 ಮಟಕಾ ನಂಬರ ಬರೆದ ಚೀಟಿಗಳು 2) ಒಂದು ಬಾಲ ಪೇನ್ ಹಾಗೂ 3) ನಗದು ಹಣ. 2450/- ರೂ ನೇದ್ದವುಗಳನ್ನು  ಇದ್ದು, ಸದರಿಯವನಿಗೆ ಈ ವಸ್ತುಗಳು ಬಗ್ಗೆ ಕೇಳಿದಾಗ ಇವು ಮಟಾಕಾ ಚೀಟಿ ಬರೆದ ಹಣ ಇರುತ್ತವೆ ಅಂತ ತಿಳಿಸಿದ್ದು ಅವನ್ನೆಲ್ಲಾ ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಸದರಿ ವ್ಯಕ್ತಿಯನ್ನು ಹಾಗೂ ಮುದ್ದೆಮಾಲಿನೊಂದಿಗೆ ಭಾಲ್ಕಿ ಗ್ರಾಮೀಣ ಪೊಲೀಸ್ ಠಾಣಗೆ ಬಂದು ಆರೋಪಿಯ ವಿರುದ್ದ ಜ್ಞಾಪನ ಪತ್ರದ ಮೂಲಕ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 114/2022 ಕಲಂ. 87 ಕರ್ನಾಟಕ ಪೊಲೀಸ್ ಕಾಯ್ದೆ:-**

ದಿನಾಂಕ: 19/09/2022 ರಂದು ಪಿಎಸ್ಐ ರವರು ಪೆಟ್ರೋಲಿಂಗ ಮಾಡುತ್ತಾ 16:00 ಗಂಟೆಗೆ ರಾಜೇಶ್ವರ ಗ್ರಾಮದ ಹತ್ತಿರ ಹೋದಾಗ ರಾಂಪೂರ ಗ್ರಾಮದ ಬೀರಪ್ಪಾ ಮಂದೀರದ ಹತ್ತಿರ ಕೆಲವು ಜನರು ಸಾರ್ವಜನೀಕ ಖುಲ್ಲಾ ಜಾಗದಲ್ಲಿ ಕುಳಿತು ಹಣವನ್ನು ಪಣಕ್ಕೆ ಇಟ್ಟು ಅಂದರ ಬಹಾರ ಎಂಬ ನಸಿಬೀನ ಇಸ್ಪೇಟ ಜೂಜಾಟ ಆಡುತಿದ್ದಾರೆ ಅಂತಾ ಮಾಹಿತಿ ಬಂದಾಗ ಕೂಡಲೇ ಸಿಬ್ಬಂದಿ ಹಾಗೂ ಪಂಚರೊAದಿಗೆ ಹೋಗಿ 17:30 ಗಂಟೆಗೆ ರಾಂಪೂರ ಗ್ರಾಮದ ಬೀರಪ್ಪಾ ಮಂದೀರದ ಹತ್ತಿರ ಹೋಗಿ ಮರೆಯಲ್ಲಿ ನಿಂತು ನೋಡಲು ಬೀರಪ್ಪಾ ಮಂದೀರದ ಹತ್ತಿರ 6 ಜನರು ಸಾರ್ವಜನೀಕ ಖುಲ್ಲಾ ಜಾಗೆಯಲ್ಲಿ ಗೋಲಾಕಾರವಾಗಿ ಕುಳಿತು ಹಣವನ್ನು ಪಣಕ್ಕೆ ಇಟ್ಟು ಅಂದರ ಬಹಾರ ಎಂಬ ನಸಿಬೀನ ಇಸ್ಪೇಟ ಜೂಜಾಟ ಆಡುತಿದ್ದನ್ನು ನೋಡಿ 17:45 ಗಂಟೆಗೆ ಪಂಚರ ಸಮಕ್ಷಮ ಸದರಿಯವರ ಮೇಲೆ ದಾಳಿ ಮಾಡಿ ಹಿಡಿದು ಒಬ್ಬೊಬ್ಬರ ಹೆಸರು ಮತ್ತು ವಿಳಾಸ ವಿಚಾರಿಸಲು ತಮ್ಮ ಹೆಸರು 1] ಯಲ್ಲಾಲಿಂಗ ತಂದೆ ಸಂಗಪ್ಪಾ ಶೇರಿಕಾರ ಸಾ:ರಾಂಪೂರ ಅಂತಾ ತಿಳಿಸಿದ್ದು ಇವನ ಹತ್ತಿರ 460/-ರೂ ಇದ್ದವು 2] ಮಹೇಶ ತಂದೆ ಬಕ್ಕಪ್ಪಾ ಹೆ.ಚ್ ವಾಡಿ ಸಾ:ರಾಂಪೂರ ಅಂತಾ ತಿಳಿಸಿದ್ದು ಇವನ ಹತ್ತಿರ 850/-ರೂ ಇದ್ದವು 3] ರಮೇಶ ತಂದೆ ಜಗನ್ನಾಥ ಬೋಳಸುರೆ ಸಾ:ರಾಂಪೂರ ಅಂತಾ ತಿಳಿಸಿದ್ದು ಸದರಿಯವನ ಹತ್ತಿರ 450/-ರೂ ಇದ್ದವು 4] ಮನೋಹರ ತಂದೆ ರಾಮಣ್ಣಾ ಬೋಳಸುರೆ ಸಾ:ರಾಂಪೂರ ಅಂತಾ ತಿಳಿಸಿದ್ದು ಇವನ ಹತ್ತಿರ 750/-ರೂ ಇದ್ದವು 5] ಶ್ರೀಕಾಂತ ತಂದೆ ಹಣಮಂತ ಲಂಬೂರೆ ಸಾ: ರಾಂಪೂರ ಅಂತಾ ತಿಳಿದ್ದು ಇವನ ಹತ್ತಿರ 600/-ರೂ ಇದ್ದವು 6] ರಮೇಶ ತಂದೆ ತಿಪ್ಪಣ್ಣಾ ರೆಡ್ಡಿ ಸಾ:ರಾಂಪೂರ ಅಂತಾ ತಿಳಿದ್ದು ಇವನ ಹತ್ತಿರ 560/-ರೂ ಇದ್ದವು ಮತ್ತು ಎಲ್ಲರ ಮಧ್ಯದಲ್ಲಿ ಜೂಜಾಟದಲ್ಲಿ ತೊಡಗಿಸಿದ ನಗದು ಹಣ 1530/-ರೂ ಗಳು ಇದ್ದವು ನಂತರ ಸರಿಯವರಿಗೆ ಪುನಃ ವಿಚಾರಣೆ ಮಾಡಲು ತಾವೆಲ್ಲರೂ ಸೆರಿ ಹಣವನ್ನು ಪಣಕ್ಕೆ ಇಟ್ಟು ಅಂದರ ಬಹಾರ ಎಂಬ ನಶಿಬಿನ ಇಸ್ಪೇಟ ಜೂಜಾಟ ಆಡುತಿದ್ದ ಬಗ್ಗೆ ಒಪ್ಪಿಕೊಂಡಿದರಿAದ ಸದರಿಯವರು ಇಸ್ಪೆಟ ಜೂಜಾಟದಲ್ಲಿ ತೋಡಗಿಸಿದ ಒಟ್ಟು ನಗದು ಹಣ 5200/-ರೂ ಹಾಗು 52 ಇಸ್ಪೇಟ ಎಲೆಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಆರೋಪಿತರನ್ನು ವಶಕ್ಕೆ ಪಡೆದು ಮರಳಿ ಠಾಣೆಗೆ ಬಂದು ಜ್ಞಾಪನ ಪತ್ರದ ಮೂಲಕ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.